★★★

ಮರುದಿನ ಬೆಳಗ್ಗೆ ಏಳುವಾಗ, ಕರಮಚಂದ ಆಗಲೇ ಉಡುಪು ಧರಿಸಿ, ಸಿದ್ಧನಾಗಿದ್ದ.

"ಬಿದ್ದಪ್ಪ, ಬೇಗ ರೆಡಿಯಾಗು. ಚಹಾವನ್ನು ನಾವು ಪಂದರಪರೆ ಹೋಂ ಸ್ಟೇಯಲ್ಲಿ ಪೂವಯ್ಯನ ಜೊತೆ ಕುಡಿಯೋಣ."

"ಪೂವಯ್ಯ ಅಲ್ಲಿದ್ದಾನೆಯೇ?"

"ಹೂಂ. ಆಸಾಮಿ ಫೋನು ಸ್ವಿಚ್ ಆಫ್ ಮಾಡಿ ಭಾರೀ ತೊಂದರೆ ಮಾಡ್ದ. ನಿನ್ನೆ ರಾತ್ರಿ ಎರಡು ಗಂಟೆಯ ಹೊತ್ತಿಗೆ ಸ್ವಲ್ಪ ಸಮಯ ಫೋನು ಆನ್ ಮಾಡಿದ್ದಾನೆ. ತಕ್ಷಣ ನನ್ಗೆ ಅವ್ನ ಲೊಕೇಶನ್ ಶೇರ್ ಆಗಿದೆ. ನಾವು ತಡಮಾಡೋದು ಬೇಡ."

ಕರಮಚಂದನಲ್ಲಿದ್ದ 'ನೆಲೆ' ಎನ್ನುವ ತಂತ್ರಾಂಶದ ಮೂಲಕ ಸ್ವಿಚ್ ಆನ್ ಆಗಿರುವ ಫೋನು ಇರುವ ಜಾಗವನ್ನು ಪತ್ತೆ ಮಾಡಬಹುದು. ಅದಕ್ಕೆ ಮೊಬೈಲ್ ಸೇವೆ ನೀಡುವ ಕಂಪನಿಯವರ ಸಹಕಾರ ಆತ ಪಡೆದುಕೊಂಡಿದ್ದ.

ಚಿಪ್ಪಿ ಪೂವಯ್ಯನಿಗೆ ನಮ್ಮನ್ನು ಕಂಡು ಆಘಾತವಾಯಿತು.

"ನಾವು ಪೊಲೀಸಿನವರಲ್ಲ. ಚಿಂತೆ ಮಾಡ್ಬೇಡಿ, ಪೂವಯ್ಯ. ನೀವು ಇಲ್ಲೇಕೆ ಅಡಗಿಕೊಂಡಿದ್ದೀರಿ ಅಂತ ಹೇಳಬಹುದೇ?" ಕರಮಚಂದ ಆತನನ್ನು ಸಂತೈಸುತ್ತಾ ಕೇಳಿದ.

"ನನ್ ಮಕ್ಕಳು ನನ್ನ ಮೇಲೆ ಆಕ್ರಮಣ ಮಾಡಬಹುದೆಂಬ ಭಯದಿಂದ ಇಲ್ಲಿ ಅಡಗಿದ್ದೀನಿ."

"ಪೂವಯ್ಯ, ಎಷ್ಟು ದಿನ ಅಂತ ಇಲ್ಲಿ ಅಡಗಿರುತ್ತೀರಿ? ನಿಮ್ಮ ತಂಗಿಯ ಮಗಳಿಗೆ ನೀವು ಆಸ್ತಿಯಲ್ಲಿ ಪಾಲು ಕೊಡಬೇಕೆಂದು ಬಯಸಿದ್ದೀರಿ, ಅಲ್ವೇ? ಇದನ್ನು ನಿಮ್ಮ ತಂಗಿಯ ಮಗಳು, ಸುಜಾತ, ನನ್ಗೆ ತಿಳಿಸಿದಳು. ನೀವು ಅವಳಿಗೆ ಆಗಾಗ್ಗೆ ಫೋನು ಮಾಡುವುದನ್ನು ನಿಮ್ಮ ಚರವಾಣಿಯ ಕರೆಗಳ ವಿವರದಲ್ಲಿ ನೋಡಿದೆ. ಆಕೆ ತನಗೆ ಆಸ್ತಿ ಬೇಡ ಅಂತಲೂ ಹೇಳಿದ್ದಾಳೆ. ಆಕೆಗೆ ಆಸ್ತಿ ಕೊಡೋದಿಕ್ಕೆ ನಿಮ್ಮ ಮಕ್ಕಳು ಅಡ್ಡಗಾಲು ಹಾಕ್ತಿದ್ದಾರೆ. ನೀವು ಈಗಾಗಲೇ ಒಂದು ಉಯಿಲು ಮಾಡಿದ್ದು, ಅದರಲ್ಲಿ ಆಸ್ತಿಯನ್ನು ನಿಮ್ಮ ಮಗಂದಿರಿಗೆ ಹಂಚಿದ್ದೀರಿ. ಆಕೆ ನೀವು ಹೊಸದಾಗಿ ಒಂದು ಉಯಿಲು ಬರೆಯುತ್ತೀರಿ ಅಂತಲೂ, ಅದರ ಬಗ್ಗೆ ನಿಮ್ಮ ಮಿತ್ರ ಸುಬ್ಬಯ್ಯನಿಗೆ ಗೊತ್ತಿರುವುದಾಗಿ ಹೇಳಿದಳು. ಆದರೆ ಆ ಉಯಿಲು ಎಲ್ಲಿದೆ ಅಂತ ಆಕೆಗೆ ತಿಳಿದಿಲ್ಲವೆಂದಳು."

"ನೂರಕ್ಕೆ ನೂರು ನಿಜ, ಸಾರ್. ಆದರೆ ನಿಮ್ಗೆ ಇದೆಲ್ಲ ಹೇಗೆ ಗೊತ್ತಾಯಿತು?"

"ನಿಮ್ಮ ವಾಕಿಂಗ್ ಸ್ಟಿಕ್ಕಿನಿಂದ. ನಿಮ್ಮ ಮಕ್ಕಳು ಅದನ್ನು ಮೆಡಿಕಲ್ ಅಂಗಡಿಯಿಂದ ಕದ್ದಾಗಲೇ ಅದರಲ್ಲಿ ಏನೋ ಮಹತ್ವವಿದೆ ಅಂತ ಭಾವಿಸಿದೆ. ಚೆಂದಕ್ಕಿಯನ್ನೂ ನಿಮ್ಮ ಮಕ್ಕಳೇ ನಿಮ್ಮ ಮೇಲೆ ನಿಗಾ ಇಡಲು ನೇಮಿಸಿದ್ದಲ್ವೇ? ಯಾಕೆಂದರೆ ಆತ ವಾಕಿಂಗ್ ಸ್ಟಿಕ್ ಬಗ್ಗೆ ಸುಳ್ಳು ಹೇಳಿದ್ದ. ಆತನ ಚರವಾಣಿಯಿಂದ ನಿಮ್ಮ ಮಕ್ಕಳಿಗೆ ಆಗಾಗ್ಗೆ ಹೋಗುವ ಕರೆಗಳು ಅವರ ನಡುವಿನ ಸಂಬಂಧ ಹೇಳುತ್ತೆ. ಅದಿಕ್ಕೇ ನೀವು ಆತನಲ್ಲಿ ಊಟ ತರಲು ಹೇಳಿ, ಆತ ಬರುವುದರೊಳಗೆ, ನಾಪತ್ತೆಯಾದಿರಿ. ಬೆಳಗ್ಗೆಯೇ ಹಣ ಬ್ಯಾಂಕಿನಿಂದ ತೆಗೆದು ಸಿದ್ಧರಾಗಿದ್ದೀರಲ್ವೇ?"

"ಹೌದು, ವಾಕಿಂಗ್ ಸ್ಟಿಕ್ಕನ್ನು ಮಕ್ಕಳು ಅಂಗಡಿಯಿಂದ ಕದ್ದರೇ? ನನಗದು ತಿಳಿದಿರಲಿಲ್ಲ."

"ಈಗಾಗಲೇ ಉಯಿಲು ಇದ್ದರೂ, ಮಕ್ಕಳೇಕೆ ವಾಕಿಂಗ್ ಸ್ಟಿಕ್ಕಿನ ಹಿಂದೆ ಬಿದ್ದಿದ್ದಾರೆ? ಅದು ಆಸ್ತಿಗೆ ಸಂಬಂಧಿಸಿರಲೇಬೇಕೆಂದು ತರ್ಕಿಸಿದೆ. ವಾಕಿಂಗ್ ಸ್ಟಿಕ್ಕಿನಲ್ಲಿದ್ದ ಕಮಲ ಮತ್ತು ಅದರ ಮೇಲೆ ನಿಂತಂತಿರುವ ನಕ್ಷತ್ರದ ಚಿಹ್ನೆಯಲ್ಲಿ ಏನೋ ಸಂಕೇತವಿದೆ ಅಂತ ಅರಿವಾಯಿತು. ನಿಮ್ಮ ಮಕ್ಕಳು ಸುಬ್ಬಯ್ಯನಲ್ಲಿ ಅದನ್ನು ಒಯ್ದಾಗ, ಆತನಿಗೂ, ಅದಕ್ಕೂ ನಂಟು ಇದೆ ಅಂತ ಭಾವಿಸಿದೆ. ಆ ಚಿತ್ರಗಳ ಅರ್ಥವೇನು? ಆ ನಕ್ಷತ್ರದ ಚಿಹ್ನೆಯು ಒಂದು ಖಾಸಗಿ ಬ್ಯಾಂಕಿನ ಲೋಗೋ. ಹಾಗಿದ್ರೆ ಅಲ್ಲಿ ಲಾಕರ್